ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ: 417/2024

ಚಾಸಾ:6 ಪ್ರಾಸಾ:6

ದಿನಾಂಕ: 26.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಿರಂಜನ್ ಕಾಮತ್ |
| ತಂದೆಯ ಹೆಸರು | : | ಶ್ರೀಧರ ಕಾಮತ್ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಗೋಪಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿಲ್ಲ. ಸಾಕ್ಷಿಗೆ ನಿಪಿ-2 ಮತ್ತು ನಿಪಿ-3ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಡಿ) ಮತ್ತು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿ: 02-01-2024 ರಂದು ಮಧ್ಯಾಹ್ನ 1-30 ರ ಸಮಯದಲ್ಲಿ ಘಟನಾ ಸ್ಥಳದಲ್ಲಿ ಪೊಲೀಸರು ಬಂದಿದ್ದು ನನ್ನ ಸಹಿ ಪಡೆದಿರುತ್ತಾರೆ. ಆ ವೇಳೆಗೆ ಚಾಸಾ-4 ರವರು ಹಾಜರು ಇದ್ದರು. ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿ ನಿಪಿ-4ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-5 ಮತ್ತು 6ನ್ನು ನೋಡಿ ಗುರುತಿಸಿಲ್ಲ. ಸಾಕ್ಷಿ ನಿಪಿ-7 ಮತ್ತು 8 ರಲ್ಲಿರುವ ವಾಹನಗಳನ್ನು ಠಾಣೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ಮೇಲೆ ಹೇಳಿದ ದಿನದಂದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ರವರು ಸಹ ಕ್ರಮ ಜರುಗಿಸುವ ವೇಳೆಗೆ ಹಾಜರು ಇದ್ದು ನಿಪಿ-5 ರಿಂದ 8 ರಲ್ಲಿ ಕಾಣುವ ವಾಹನವನ್ನು ಪೊಲೀಸರು ವಶಕೆಕ ಪಡೆದು ಪಂಚನಾಮೆ ಜರುಗಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದಃ</u>**

ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲಾಗುವುದಿಲ್ಲ. ಪೊಲೀಸರು ಸೂಚಿಸಿದಂತೆ ಮೃತರ ಸಂಬಂಧಿಕರಾಗಿ ಸ್ಥಳದಲ್ಲಿ ಹಾಜರು ಇದ್ದೆ ಎಂದರೆ ಸರಿ. ಸದ್ರಿ ದಿನ ನಾನು ಠಾಣೆಗೆ ಹೋಗಿ ಕೆಲವು ದಾಖಲೆಗಳಿಗೆ ಅಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಯಾವೆಲ್ಲಾ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದು ಈಗ ಹೇಳಲಾಗುವುದಿಲ್ಲ. ಸ್ಥಳದಲ್ಲಿ ಸಹಿ ಮಾಡಿದ ದಾಖಲೆಗಳು ಯಾವುವು ಎಂದು ಈಗ ಹೇಳಲಾಗುವುದಿಲ್ಲ. ಸ್ಥಳದಲ್ಲಿ ಯಾವೆಲ್ಲಾ ವಸ್ತುಗಳನ್ನು ವಶಕ್ಕೆ ಪಡೆದರು ಎಂದು ನನಗೆ ತಿಳಿದಿಲ್ಲ. ಸ್ಥಳದ ಚೆಕ್ಕು ಬಂಧಿ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಸ್ಥಳವನ್ನು ಯಾರು ತೋರಿಸಿದ್ದು ಎಂದು ನನಗೆ ತಿಳಿದಿಲ್ಲ. ಎಲ್ಲಾ ದಾಖಲೆಗಳಿಗೂ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಹಾಗೂ ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ನೆನಪಿಲ್ಲ. ಠಾಣೆಯಲ್ಲಿ ಸಹಿ ಮಾಡಿದ್ದನ್ನು ಹೊರತುಪಡಿಸಿ ಬೇರೆ ಎಲ್ಲೂ ಸಹಿ ಮಾಡಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**